# **ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 786 (888) |
| ಸದಸ್ಯರ ಹೆಸರು | : | ಶ್ರೀ ಎ ವಸಂತಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು ) |
| ಉತ್ತರಿಸುವ ದಿನಾಂಕ | : | 16/12/2024. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು . |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ, ಖಾಸಗಿ ಅನುದಾನಿತ, ಅನುದಾನ ರಹಿತ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢ ಶಾಲೆಗಳು ಹಾಗೂ ಪದವಿಪೂರ್ವ ಶಾಲೆಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>

**SATS ತಂತ್ರಾಂಶದ ಮಾಹಿತಿಯನುಸಾರ:**

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ, ಖಾಸಗಿ ಅನುದಾನಿತ, ಅನುದಾನರಹಿತ, ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಿವರ:

<table>
<tr><td colspan="3">ಸರ್ಕಾರಿ ಶಾಲೆ</td><td colspan="3">ಅನುದಾನಿತ ಶಾಲೆ</td><td colspan="3">ಅನುದಾನ ರಹಿತ ಶಾಲೆ</td></tr>
<tr><td>ಕಿ.ಪ್ರಾ</td><td>ಹಿ. ಪ್ರಾ</td><td>ಪ್ರೌಢ</td><td>ಕಿ. ಪ್ರಾ</td><td>ಹಿ. ಪ್ರಾ</td><td>ಪ್ರೌಢ</td><td>ಕಿ.ಪ್ರಾ</td><td>ಹಿ. ಪ್ರಾ</td><td>ಪ್ರೌಢ</td></tr>
<tr><td>19863</td><td>21726</td><td>4871</td><td>165</td><td>2399</td><td>3662</td><td>2273</td><td>5746</td><td>8508</td></tr>
</table>

**ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.**

**ಪದವಿ ಪೂರ್ವ ಕಾಲೇಜುಗಳ ವಿವರ:**

<table>
<tr><td>ಕ್ರ.ಸಂ</td><td>ಕಾಲೇಜು ವಿಧ</td><td>ಒಟ್ಟು ಸಂಖ್ಯೆ</td></tr>
<tr><td>1</td><td>ಸರ್ಕಾರಿ ಪದವಿ ಪೂರ್ವ ಕಾಲೇಜುಗಳು</td><td>1238</td></tr>
<tr><td>2</td><td>ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳು</td><td>820</td></tr>
<tr><td>3</td><td>ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳು</td><td>3558</td></tr>
<tr><td colspan="2">ಒಟ್ಟು</td><td>5616</td></tr>
</table>

**ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.**

</td></tr>
<tr><td>ಆ)</td><td>ಈ ಶಾಲಾ ಕಾಲೇಜುಗಳನ್ನು ಮಂಜೂರು ಮಾಡಲು ಇರುವ ಮಾನದಂಡಗಳೇನು; (ವಿವರ ನೀಡುವುದು)</td><td>

**ಖಾಸಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆ.:**

ಖಾಸಗಿ ಅನುದಾನರಹಿತ ಶಾಲೆಗಳನ್ನು ಮಂಜೂರು ಮಾಡಲು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು-1997ರ ನಿಯಮ 4(1)ರಲ್ಲಿ ವಿವರಿಸಿರುವಂತೆ ಜನಸಾಂದ್ರತೆ ಮತ್ತು ಉದ್ದೇಶಿತ ಶಾಲೆಯ ಸುತ್ತ ಮುತ್ತ ಇರುವ ಶಿಕ್ಷಣ ಸಂಸ್ಥೆಗಳ ಮಾಹಿತಿಯನ್ನು ಪರಿಶೀಲಿಸಿ, ಶಾಲಾ ಅಗತ್ಯತೆಯನ್ನು ಗುರುತಿಸಿದ ನಂತರವೇ ಹೊಸ ಶಾಲೆಗಳ ನೋಂದಣಿ ಮತ್ತು ಉನ್ನತೀಕರಿಸಿದ ತರಗತಿಗಳಿಗೆ ಅನುಮತಿ ನೀಡಲು ಸಕ್ಷಮ ಪ್ರಾಧಿಕಾರಿಗಳಿಗೆ ನಿರ್ದೇಶನವನ್ನು ಇಲಾಖೆ ಸುತ್ತೋಲೆ ಮೂಲಕ ನೀಡಲಾಗಿರುತ್ತದೆ.

</td></tr>
</table>

| | | |
|---|---|---|
| | | ಮುಂದುವರೆದು, ಕರ್ನಾಟಕ ಶಿಕ್ಷಣ ಕಾಯ್ದೆ-1983ರ ನಿಯಮ-31 ರಡಿಯಲ್ಲಿ ಯಾವುದೇ ಶಿಕ್ಷಣ ಸಂಸ್ಥೆ ಹೊಸದಾಗಿ ನೋಂದಣಿ ಅಥವಾ ಉನ್ನತೀಕರಿಸಿದ ತರಗತಿಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸುವಾಗ ಈ ಕೆಳಕಂಡ ಕಾಯ್ದೆ, ನಿಯಮ ಮತ್ತು ಅಧಿಸೂಚನೆಯಂತೆ ನಿಯಮಾನುಸಾರ ಪರಿಶೀಲಿಸಿ ಆಯಾ ಜಿಲ್ಲೆಯ ಉಪನಿರ್ದೇಶಕರು[ಆಡಳಿತ] ಅನುಮತಿ ನೀಡುತ್ತಾರೆ.<br>1. ಕರ್ನಾಟಕ ಶಿಕ್ಷಣ ಕಾಯ್ದೆ 1983<br>2. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು-1997<br>3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 2017 ದಿನಾಂಕ:07.03.2018<br>4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 2017 ದಿನಾಂಕ:08.03.2018<br>5. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಕಚೇರಿಯ ಜ್ಞಾಪನ ಸಂಖ್ಯೆ: ಸಿ7(2)ಪ್ರಾಶಿಅ/ಜ.ಗಾ&ಶಿ.ಸಂ.ಮಾ/10/2023-24, ದಿನಾಂಕ:11.03.2024<br>6. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಕಚೇರಿಯ ಜ್ಞಾಪನಾ ಸಂಖ್ಯೆ: ಎಡಿಎಂ-2[4]ಹೊ.ಶಾ.ಮ.ವಿ.ಪ್ರಾ 6/2022-23 ದಿನಾಂಕ:23/05/2023.<br><br>**ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (1 ರಿಂದ 5ನೇ ತರಗತಿ) ಪ್ರಾರಂಭಿಸಲು**<br>• 1 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ ಕಿರಿಯ ಪ್ರಾಥಮಿಕ ಶಾಲೆ ಇಲ್ಲದೆ ಇರುವುದು<br>• ಜನವಸತಿ ಪ್ರದೇಶದಲ್ಲಿ 100 ರಿಂದ 200 ಜನಸಂಖ್ಯೆ ಇರುವುದು<br>• ನಗರ ಪ್ರದೇಶ/ ಭೌಗೋಳಿಕ ಅಡೆ ತಡೆ ಇದ್ದಲ್ಲಿ 1 ಕಿ.ಮೀ ನಿಯಮಕ್ಕೆ ಸಡಿಲಿಕೆ ಇರುತ್ತದೆ.<br><br>**ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಗೆ ( 6 ರಿಂದ 7/8ನೇ ತರಗತಿಗೆ) ಉನ್ನತೀಕರಣ ಮಾಡಲು**<br>• 3 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ ಹಿರಿಯ ಪ್ರಾಥಮಿಕ ಶಾಲೆ ಇಲ್ಲದೆ ಇರುವುದು<br>• ನಗರ ಪ್ರದೇಶ/ ಭೌಗೋಳಿಕ ಅಡೆ ತಡೆ ಇದ್ದಲ್ಲಿ 3 ಕಿ.ಮೀ ನಿಯಮಕ್ಕೆ ಸಡಿಲಿಕೆ ಇರುತ್ತದೆ.<br>**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 8ನೇ ತರಗತಿಯನ್ನು/ಪ್ರೌಢಶಾಲೆ ಪ್ರಾರಂಭಿಸುವುದು**<br>• 5 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ 8ನೇ ತರಗತಿ ಇರುವ ಹಿರಿಯ ಪ್ರಾಥಮಿಕ ಶಾಲೆ /ಪ್ರೌಢಶಾಲೆ ಇಲ್ಲದೆ ಇರುವುದು. ನಗರ ಪ್ರದೇಶ/ ಭೌಗೋಳಿಕ ಅಡೆತಡೆ ಇದ್ದಲ್ಲಿ 5 ಕಿ.ಮೀ ನಿಯಮಕ್ಕೆ ಸಡಿಲಿಕೆ ಇರುತ್ತದೆ. |

| | | |
|---|---|---|
| | | **ಸರ್ಕಾರಿ ಪ್ರೌಢಶಾಲೆ:**<br><br>ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಕೇಂದ್ರ ಶಿಕ್ಷಣ ಮಂತ್ರಾಲಯದ ಮಾನದಂಡದನ್ವಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲಾಗುತ್ತಿದೆ.<br><br>ಮಾನದಂಡಗಳು ಈ ಕೆಳಕಂಡಂತೆ ಅನ್ವಯವಾಗುತ್ತದೆ.<br>• ಸರ್ಕಾರಿ ಹಿರಿಯ ಪ್ರಾಥಮಿಕಶಾಲೆಯಲ್ಲಿ 8ನೇ ತರಗತಿಯನ್ನು ಹೊಂದಿರಬೇಕಾಗಿರುತ್ತದೆ.<br>• 8ನೇ ತರಗತಿಯಲ್ಲಿ ದಾಖಲಾತಿ 70 ವಿದ್ಯಾರ್ಥಿಗಳಿರಬೇಕು.<br>• 5 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ /ಅನುದಾನಿತ/ಅನುದಾನರಹಿತ ಪ್ರೌಢಶಾಲೆಗಳಿರಬಾರದು.<br>• ಜಿಐಎಸ್ ಮ್ಯಾಪಿಂಗ್ ಕಡ್ಡಾಯವಾಗಿ ನಿರ್ವಹಿಸಿರಬೇಕು.<br><br>**ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ:**<br>1. ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಮಾನದಂಡಗಳನ್ನು ರೂಪಿಸಲಾಗಿದ್ದು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅಥವಾ ಪ್ರೌಢಶಾಲೆಗಳನ್ನು ಉನ್ನತೀಕರಿಸಿ, ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸಲು ಯಾವುದೇ ನಿಖರವಾದ ಮಾನದಂಡಗಳು ರಚನೆಯಾಗಿರುವುದಿಲ್ಲ.<br>2. ರಾಜ್ಯದಲ್ಲಿನ ಗ್ರಾಮಾಂತರ ಪ್ರದೇಶಗಳಲ್ಲಿನ ಶೈಕ್ಷಣಿಕ ವಾತಾವರಣವನ್ನು ಉತ್ತಮಪಡಿಸುವ ಉದ್ದೇಶದಿಂದ ಪ್ರತಿ 10-20 ಕಿ.ಮೀಗಳಿಗೆ ಒಂದರಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಬಗ್ಗೆ ಪರಿಗಣಿಸಲಾಗುತ್ತಿದೆ.<br>3. ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅಥವಾ ಪ್ರೌಢಶಾಲೆಗಳನ್ನು ಉನ್ನತೀಕರಿಸಲು ಉದ್ದೇಶಿಸಿರುವ ಕೆಲವು ಸ್ಥಳಗಳಲ್ಲಿ ಫೀಡಿಂಗ್ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಹಾಗೂ ಪ್ರೌಢಶಾಲೆಗಳನ್ನು ಉನ್ನತೀಕರಿಸಲು ನಿರ್ಧರಿಸಿರುವ ಪ್ರೌಢಶಾಲೆಯಲ್ಲಿ ಮೂಲಭೂತ ಸೌಲಭ್ಯಗಳು ಇರುವುದನ್ನು ಪರಿಗಣಿಸಲಾಗುತ್ತಿದೆ.<br>4. ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಪ್ರದೇಶಗಳ ಜನಸಂಖ್ಯೆ ಮತ್ತು ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣವನ್ನು ಗಮನಿಸಿ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಗಣ್ಯ ವ್ಯಕ್ತಿಗಳ ಕೋರಿಕೆ ಮೇರೆಗೆ ಬೇಡಿಕೆ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿದೆ.<br>5. ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಕೆಲವು ಸ್ಥಳಗಳಲ್ಲಿ ಈಗಾಗಲೇ ಖಾಸಗಿ ಪದವಿ ಪೂರ್ವ ಕಾಲೇಜುಗಳಿದ್ದರೂ ಸಹ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉತ್ತೇಜನ ನೀಡುವ ಸಲುವಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುತ್ತಿದೆ. |

| | | |
|---|---|---|
| | | **ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ:**<br>1. ಕರ್ನಾಟಕ ಪದವಿ ಪೂರ್ವ ಶಿಕ್ಷಣ(ಆಡಳಿತ, ಶೈಕ್ಷಣಿಕ, ನೋಂದಣಿ ಹಾಗೂ ಸಹಾಯಾನುದಾನ ಇತ್ಯಾದಿ) ನಿಯಮ-2024ರ ನಿಯಮ-5ರಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳು, ನಿಯಮಾನುಸಾರ ಅಳತೆಯ ಕೊಠಡಿ, ಆಟದ ಮೈದಾನ, ಬೋಧಕರ ನೇಮಕ, ಹಾಗೂ ಇತರೆ ಅಗತ್ಯ ದಾಖಲೆಗಳು ಮತ್ತು ಸರ್ಕಾರದ ಆದೇಶ ಸಂಖ್ಯೆ:ಇಡಿ 709 ಪಿಜಿಸಿ 2017, ದಿನಾಂಕ:08.03.2018ರ ಷರತ್ತುಗಳನ್ನು ಪೂರೈಸುವ ಅರ್ಹ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಲಾಗುತ್ತಿದೆ. |
| ಇ) | ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದ್ದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸರ್ಕಾರಿ ಶಾಲಾ ಕಾಲೇಜುಗಳ ಸಂಖ್ಯೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅವಶ್ಯಕತೆಗನುಗುಣವಾಗಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಶಾಲಾ ಕಾಲೇಜುಗಳನ್ನು ಮಂಜೂರು ಮಾಡಲು ಸಾಧ್ಯವಿಲ್ಲವೇ; ಸಾಧ್ಯವಿದ್ದಲ್ಲಿ ಯಾವಾಗ ಮಂಜೂರು ಮಾಡಲಾಗುವುದು? | 1. ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳ ಸಂಖ್ಯೆಗಳನ್ನು ದಕ್ಷಿಣ ಕರ್ನಾಟಕ ಭಾಗದ ಶಾಲೆಗಳಿಗೆ ಹೋಲಿಸಿದಾಗ ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳ ಸಂಖ್ಯೆ ಹೆಚ್ಚಾಗಿರುತ್ತದೆ.<br>2. ಕಳೆದ 3-5 ವರ್ಷಗಳಿಂದ ಇರುವ ಶಾಲೆಗಳು, ಪ್ರಸ್ತುತ ಹಾಗೂ ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಉನ್ನತೀಕರಣಗೊಳಿಸಲಾಗುತ್ತಿದ್ದು, ಈ ಶಾಲೆಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಯೋಜನೆಯಡಿ ಶಾಲೆಗಳ ಶೈಕ್ಷಣಿಕ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br>3. 2024-25ನೇ ಸಾಲಿನಲ್ಲಿ ಕಲಬುರಗಿ ವಿಭಾಗಕ್ಕೆ ಸಂಬಂಧಿಸಿದಂತೆ 19 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಸರ್ಕಾರಿ ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲು ಪರಿಶೀಲಿಸಲಾಗುತ್ತಿದೆ.<br><br>**ಪದವಿ ಪೂರ್ವ ಕಾಲೇಜುಗಳು:**<br>2024-25ನೇ ಸಾಲಿನ ಆಯವ್ಯಯ ಕಂಡಿಕೆ-98ರಲ್ಲಿ "ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಸಹಯೋಗದೊಂದಿಗೆ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು" ಎಂದು ಘೋಷಿಸಲಾಗಿದ್ದು, ಅದರನ್ವಯ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಸಹಯೋಗದೊಂದಿಗೆ 2024-25ನೇ ಸಾಲಿನಿಂದ 06 ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ. |

**ಸಂಖ್ಯೆ:** ಇಪಿ 411 ಪಿಜಿಸಿ 2024

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ-1

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ, ಖಾಸಗಿ ಅನುದಾನಿತ, ಅನುದಾನರಹಿತ. ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಸಂಖ್ಯೆ (ಎಸ್ ,.ಟಿ, ಎಸ್ ಮಾಹಿತಿ ಆಧಾರಿಸಿ )

| District | Department of Education | | | Government Aided | | | Private Unaided (Recognized) | | | Total | | |
|---|---|---|---|---|---|---|---|---|---|---|---|---|
| | LPS | HPS | HS | LPS | HPS | HS | LPS | HPS | HS | LPS | HPS | HS |
| BAGALKOT | 451 | 788 | 190 | 6 | 98 | 126 | 150 | 205 | 185 | 607 | 1091 | 501 |
| BALLARI | 228 | 366 | 125 | 1 | 41 | 34 | 89 | 171 | 177 | 318 | 578 | 336 |
| BELAGAVI | 517 | 831 | 137 | 5 | 49 | 205 | 86 | 147 | 184 | 608 | 1027 | 526 |
| BELAGAVI CHIKKODI | 692 | 1032 | 194 | 14 | 141 | 151 | 89 | 304 | 277 | 795 | 1477 | 622 |
| BENGALURU RURAL | 607 | 425 | 64 | 0 | 15 | 48 | 6 | 62 | 206 | 613 | 502 | 318 |
| BENGALURU U NORTH | 216 | 258 | 60 | 1 | 98 | 111 | 37 | 318 | 1051 | 254 | 674 | 1222 |
| BENGALURU U SOUTH | 389 | 451 | 91 | 4 | 126 | 135 | 64 | 470 | 1516 | 457 | 1047 | 1742 |
| BIDAR | 493 | 711 | 167 | 4 | 193 | 138 | 200 | 320 | 272 | 697 | 1224 | 572 |
| CHAMARAJANAGARA | 316 | 403 | 86 | 5 | 31 | 54 | 23 | 66 | 72 | 344 | 500 | 212 |
| CHIKKABALLAPURA | 865 | 517 | 111 | 0 | 43 | 41 | 11 | 86 | 155 | 876 | 646 | 307 |
| CHIKKAMANGALURU | 616 | 640 | 116 | 0 | 20 | 97 | 29 | 80 | 106 | 645 | 740 | 319 |
| CHITRADURGA | 791 | 828 | 115 | 6 | 66 | 204 | 27 | 93 | 162 | 824 | 987 | 481 |
| DAKSHINA KANNADA | 233 | 659 | 170 | 7 | 165 | 105 | 16 | 69 | 309 | 256 | 893 | 584 |
| DAVANAGERE | 482 | 577 | 135 | 7 | 130 | 170 | 57 | 218 | 185 | 546 | 925 | 490 |
| DHARWAD | 213 | 521 | 112 | 7 | 72 | 144 | 82 | 115 | 218 | 302 | 708 | 474 |
| GADAG | 183 | 398 | 115 | 8 | 40 | 100 | 47 | 92 | 88 | 238 | 530 | 303 |
| HASSAN | 1166 | 954 | 241 | 1 | 41 | 118 | 26 | 124 | 172 | 1193 | 1119 | 531 |
| HAVERI | 447 | 681 | 155 | 6 | 52 | 158 | 61 | 104 | 139 | 514 | 837 | 452 |
| KALBURGI | 759 | 936 | 298 | 11 | 188 | 120 | 217 | 506 | 442 | 987 | 1630 | 860 |
| KODAGU | 111 | 251 | 47 | 1 | 7 | 42 | 6 | 34 | 83 | 118 | 292 | 172 |
| KOLAR | 1135 | 609 | 124 | 0 | 41 | 60 | 19 | 130 | 229 | 1154 | 780 | 413 |
| KOPPAL | 367 | 526 | 185 | 3 | 29 | 32 | 120 | 119 | 120 | 490 | 674 | 337 |
| MANDYA | 702 | 799 | 215 | 3 | 57 | 96 | 37 | 136 | 175 | 742 | 992 | 486 |
| MYSURU | 903 | 927 | 233 | 10 | 111 | 133 | 60 | 204 | 389 | 973 | 1242 | 755 |
| RAICHUR | 653 | 719 | 230 | 8 | 41 | 36 | 138 | 280 | 209 | 799 | 1040 | 475 |
| RAMANAGARA | 696 | 439 | 107 | 1 | 23 | 70 | 25 | 63 | 141 | 722 | 525 | 318 |
| SHIVAMOGGA | 868 | 921 | 164 | 4 | 91 | 142 | 37 | 156 | 176 | 909 | 1168 | 482 |
| TUMAKURU | 1197 | 738 | 131 | 1 | 44 | 182 | 28 | 131 | 153 | 1226 | 913 | 466 |
| TUMAKURU MADHUGIRI | 699 | 521 | 95 | 0 | 10 | 100 | 23 | 46 | 72 | 722 | 577 | 267 |
| UDUPI | 202 | 357 | 105 | 6 | 127 | 69 | 8 | 45 | 133 | 216 | 529 | 307 |
| UTTARA KANNADA | 444 | 471 | 49 | 3 | 10 | 85 | 9 | 30 | 69 | 456 | 511 | 203 |
| UTTARA KANNADA SIRSI | 590 | 499 | 76 | 1 | 13 | 57 | 7 | 26 | 44 | 598 | 538 | 177 |
| VIJAYANAGARA | 386 | 540 | 123 | 3 | 42 | 73 | 82 | 154 | 144 | 471 | 736 | 340 |
| VIJAYAPURA | 795 | 993 | 161 | 26 | 106 | 209 | 291 | 426 | 339 | 1112 | 1525 | 709 |
| YADAGIRI | 451 | 440 | 144 | 2 | 38 | 17 | 66 | 216 | 116 | 519 | 694 | 277 |
| **Grand Total** | **19863** | **21726** | **4871** | **165** | **2399** | **3662** | **2273** | **5746** | **8508** | **22301** | **29871** | **17041** |

ಅನುಬಂಧ-1

| ಅನುಬಂಧ 01 ಪ್ರಶ್ನೆ ಸಂಖ್ಯೆ:- 786(888) | | | | | |
|---|---|---|---|---|---|
| ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಪ್ರಶ್ನೆಗೆ ಉತ್ತರಿಸುವ ಬಗ್ಗೆ. | | | | | |
| ಕ್ರ.ಸ | ಜಿಲ್ಲೆಯ ಹೆಸರು | ಜಿಲ್ಲಾ ಸಂಕೇತ ಸಂಖ್ಯೆ | ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ | ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ:- | ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ:- |
| 1 | BengaluruNorth | AN | 18 | 34 | 337 |
| 2 | BengaluruSouth | AS | 20 | 32 | 447 |
| 3 | BengaluruRural | BB | 16 | 8 | 73 |
| 4 | Ramanagara | BR | 33 | 14 | 47 |
| 5 | Bellary | CC | 48 | 19 | 118 |
| 6 | Chikkodi | DC | 31 | 40 | 129 |
| 7 | Belagavi | DD | 30 | 33 | 92 |
| 8 | Bagalkote | EB | 41 | 31 | 79 |
| 9 | Bijapura | EE | 31 | 54 | 184 |
| 10 | Bidar | FF | 24 | 38 | 138 |
| 11 | Davanagere | GD | 42 | 32 | 89 |
| 12 | Chitradurga | GG | 36 | 46 | 63 |
| 13 | Chikkamagalur | HH | 40 | 15 | 43 |
| 14 | Gadag | JG | 27 | 25 | 53 |
| 15 | Haveri | JH | 33 | 41 | 57 |
| 16 | Dharward | JJ | 29 | 31 | 126 |
| 17 | Kalaburgi | KK | 50 | 27 | 209 |
| 18 | Yadagiri | KY | 23 | 5 | 70 |
| 19 | Hassan | LL | 82 | 23 | 68 |
| 20 | Chikkaballapura | MC | 21 | 15 | 90 |
| 21 | Kolar | MM | 33 | 11 | 89 |
| 22 | Chamarajanagra | NC | 24 | 6 | 35 |
| 23 | Mysore | NN | 74 | 25 | 166 |
| 24 | Mandya | PP | 69 | 21 | 74 |
| 25 | Uttara kannada | QQ | 37 | 23 | 39 |
| 26 | Koppal | RK | 46 | 8 | 51 |
| 27 | Raichur | RR | 43 | 7 | 135 |

| | | | | | |
|---|---|---|---|---|---|
| 28 | Dhakshina kannada | SS | 55 | 31 | 133 |
| 29 | Udupi | SU | 43 | 14 | 57 |
| 30 | Shivamogga | TT | 51 | 22 | 69 |
| 31 | Tumkuru | UU | 74 | 83 | 119 |
| 32 | Kodagu | VV | 14 | 13 | 39 |
| TOTAL | | | 1238 | 820 | 3558 |

ನಿರ್ದೇಶಕರು

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ).